

ಉಣಬಡಿಸುವ ಸಮ್ಮೇಳನ ಮಾತ್ರವಾಗದೇ ಉದ್ಯೋಗಾಕಾಂಕ್ಷಿಗಳ ಪಾಲಿನ ದೊಡ್ಡ ಆಶಾಕಿರಣವಾಗಲಿದೆ. 10ನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿಯೇ ಓದಿದ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸುವ ಪ್ರಯತ್ನ ಇದಾಗಿದ್ದು, ಈಗಾಗಲೇ ಹೆಸರಾಂತ ಕಂಪನಿಗಳೊಂದಿಗೆ ಪ್ರತಿಷ್ಠಾನ ಮಾತುಕತೆ ನಡೆಸಿದೆ. ಈ ಉದ್ಯೋಗಮೇಳದ ಮೂಲಕ 'ಕನ್ನಡ ಮಕ್ಕಳ' ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವ ಉದ್ದೇಶ ಆಳ್ವಾಸ್‌ನದ್ದಾಗಿದೆ

## ಆಳ್ವಾಸ್ ವಿರಾಸತ್

ವಿರಾಸತ್ ಎಂದರೆ 'ಪಾರಂಪರಿಕ ಮೌಲ್ಯ' ಎಂದರ್ಥ. ಇದು ಸ್ಪಿಕ್‌ಮೆಕೆ ಪ್ರಣೀತ ಕಾರ್ಯಕ್ರಮ. ಸ್ಪಿಕ್‌ಮೆಕೆ ಭಾರತೀಯ ಕಲಾಪ್ರಕಾರಗಳನ್ನು ವಿದ್ಯಾರ್ಥಿಗಳಿಗೆ ಶಾಸ್ತ್ರೀಯವಾಗಿ ಹಂಚುವ ಕಲಾವೇದಿಕೆ. ಆಳ್ವಾಸ್ ತನ್ನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸುವ ಮೊದಲು ಮೂಡುಬಿದಿರೆಯ ಜನತೆಗಾಗಿ ಪ್ರಯತ್ನಪೂರ್ವಕವಾಗಿ ತಂದ ಕಾರ್ಯಕ್ರಮವಿದು. ಕ್ರಮೇಣ ಸ್ವಂತ ಅಸ್ತಿತ್ವ ಪಡೆದು 'ಆಳ್ವಾಸ್ ವಿರಾಸತ್' ಎಂದು ರೂಪಾಂತರಗೊಂಡು ಒಂದು ವಾರಗಳ ಶಾಸ್ತ್ರೀಯ ನೃತ್ಯ–ಸಂಗೀತಗಳ ರಸದೌತಣವನ್ನು ವಿದ್ಯಾರ್ಥಿಗಳಿಗೂ–ಕಲಾಸಕ್ತರಿಗೂ ಉಣಬಡಿಸುತ್ತಿದೆ. ಇದು ಸಂಪೂರ್ಣವಾಗಿ ಸಾಂಸ್ಕೃತಿಕ ಕಲಾ ಕಾರ್ಯಕ್ರಮ; ಕಾರ್ಯಕ್ರಮದ ಮೊದಲ ದಿನ ಸಣ್ಣ ಸಭಾ ಕಾರ್ಯಕ್ರಮ ಹಾಗೂ ಪ್ರತಿ ದಿನ ಕಲಾವಿದರ ಸ್ವಾಗತ–ಧನ್ಯವಾದಗಳನ್ನುಳಿದು ಎಲ್ಲೂ ಮಾತುಗಳಿಗೆ ಅವಕಾಶವಿಲ್ಲ. ಪ್ರತಿದಿನ ದೀಪಪ್ರಜ್ವಲನದ ಮೂಲಕ ಆರಂಭವಾಗುವ ಕಾರ್ಯಕ್ರಮವನ್ನು ಎರಡು ಅವಧಿಗಳಾಗಿ ವಿಂಗಡಿಸಲಾಗುತ್ತದೆ. ಹೀಗೆ ವಿಂಗಡಣೆಗೊಂಡ ಮೊದಲ ಅವಧಿ ಶಾಸ್ತ್ರೀಯ–ಜಾನಪದ ಸಂಗೀತಕ್ಕೆ, ಎರಡನೇ ಅವಧಿ ಶಾಸ್ತ್ರೀಯ–ಜಾನಪದ ನೃತ್ಯಕ್ಕೆ ಮೀಸಲು. ದಿನವೊಂದಕ್ಕೆ 50,000 ಕ್ಕಿಂತಲೂ ಹೆಚ್ಚು ಪ್ರೇಕ್ಷಕರು ಸೇರುವ ಆಳ್ವಾಸ್ ವಿರಾಸತ್ ಒಂದುವಾರಗಳ ಕಾಲ ನಡೆಯುವ ಬೃಹತ್ ಸಾಂಸ್ಕೃತಿಕ ಉತ್ಸವ. ಆಳ್ವಾಸ್ ವಿರಾಸತ್ ಆಸಕ್ತರ ತಂಡಗಳೇ ದೇಶ–ವಿದೇಶಗಳಲ್ಲಿ ಮೈವೆತ್ತಿದು, ಅವರು ಪ್ರತೀ ವಿರಾಸತ್ ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗಿಗಳಾಗುತ್ತಿದ್ದಾರೆ. ದೇಶ–ವಿದೇಶಗಳ ಪ್ರತಿಭಾನ್ವಿತ ಕಲಾತಂಡಗಳು ಈ ವೇದಿಕೆಯಲ್ಲಿ ಪ್ರದರ್ಶನ ನೀಡಿ ಪುಳಕಿತಗೊಂಡಿದ್ದರೆ; ದೇಶ ವಿದೇಶಗಳ ಕಲಾವೈವಿಧ್ಯತೆಯನ್ನು, ಸಂಗೀತದ ವಿರಾಟ್‌ರೂಪವನ್ನು ಅನುಭವಿಸಿ ವಿದ್ಯಾರ್ಥಿಗಳು, ಕಲಸಕ್ತರು ರೋಮಾಂಚನಗೊಂಡಿದ್ದಾರೆ. ವಿರಾಸತ್